ಃಂ) 60 ಪಶುವೈದ್ಯಾಧಿಕಾರಿಗಳಿಗೆ ಆದೇಶ ಸಂಖ್ಯೆ: ಪಸಂಮೀ 207 ಪಅಸೇ 2004 ದಿನಾಂಕ: 24–05–2005ರಲ್ಲಿ ಸಹಾಯಕ ನಿರ್ದೇಶಕರಾಗಿ ಮುಂಬಡ್ತಿ ನೀಡಲಾಗಿದೆ.

ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ 191 ಪಶುವೈದ್ಯಾಧಿಕಾರಿಗಳ ಸೇವೆಯನ್ನು ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 116 ಪಸಸೇ 2003 ದಿನಾಂಕ: 30–05–2005 ರಲ್ಲಿ ಸಕ್ರಮಗೊಳಿಸಲಾಗಿದೆ. 250 ಪಶುವೈದ್ಯಾಧಿಕಾರಿಗಳನ್ನು ವಿಶೇಷ ನೇರ ನೇಮಕಾತಿಯ ನಿಯಮದಡಿ ಭರ್ತಿ ಮಾಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.

ಪಶುವೈದ್ಯಕೀಯ ಮೇಲ್ವಿಚಾರಕರ ಮತ್ತು ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಮುಂಬಡ್ತಿಯ ಮೂಲಕ ಭರ್ತಿ ಮಾಡಲು, ಇಲಾಖಾ ಮುಂಬಡ್ತಿ ಸಭೆ ದಿನಾಂಕ: 29–06–2005 ರಂದು ನಡೆಸಲಾಗಿದೆ.

ಪಶುವೈದ್ಯಕೀಯ ಪರೀಕ್ಷಕರನ್ನು 50:50 ಅನುಪಾತದಲ್ಲಿ ನೇರ ನೇಮಕಾತಿ ಹಾಗೂ ಮುಂಬಡ್ತಿ ಮೂಲಕ ಭರ್ತಿ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

150 ಪಶುವೈದ್ಯಕೀಯ ಸಹಾಯಕರನ್ನು ಪಶುವೈದ್ಯಕೀಯ ಪರೀಕ್ಷಕರನ್ನಾಗಿ ಮುಂಬಡ್ತಿ ನೀಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.

ಬಾರಿ ವಾಹನ ಚಾಲನೆ ಪರವಾನಗಿ ಪಡೆದ 10 ಡಿ–ದರ್ಜೆ ನೌಕರರನ್ನು ವಾಹನ ಚಾಲಕರಾಗಿ ಮುಂಬಡ್ತಿ ನೀಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಮರುವಿನ್ಯಾಸದ ಮೂಲಕ ಹಾಗೂ ಇತರೆ ಇಲಾಖೆಗಳಿಂದ, ಡಿ ದರ್ಜೆ ಹುದ್ದೆಯನ್ನು ಅನುಕಂಪಾರ್ಥದ ನೌಕರಿಯ ಮೂಲಕ ಭರ್ತಿ ಮಾಡಲಾಗುತ್ತಿದೆ.

5154 (5910) ಶೀ ಸುನೀಲ್ ವಲ್ಲಾಪುರಿ (ಶಹಾಬಾದ್): ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಾಹಾಬಾದ ವಿಧಾನ ಕ್ಷೇತ್ರದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವಿವಿಧ ನಿಗಮಗಳಿಂದ (ಬಿ.ಸಿ.ಎಂ ಮತ್ತು ಪರಿಶಿಷ್ಟ ಜಾತಿ ಪರಿಶಿಷ್ಟ ನಿಗಮ) ಕೊರೆದ ಬಾವಿಗಳ ಸಂಖ್ಯೆ ಎಷ್ಟು;

ಆ) ಕೊರೆದ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು;

ಈ) ವಿದ್ಯುತ್ ಸಂಪರ್ಕ ಕಲ್ಪಿಸದೇ ಇರುವುದರಿಂದ ಸಾರ್ವಜನಿಕರಿಗೆ (ಫಲಾನುಭವಿಗಳಿಗೆ) ಹಾಗೂ ಸರ್ಕಾರಕ್ಕೆ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಶಹಾಬಾದ್ ವಿಧಾನಸಭಾ ಕ್ಷೇತ್ರದಲ್ಲಿ ಗಂಗಾ ಕಲ್ಯಾಣ ಯೋಜನೆ ಯಡಿಯಲ್ಲಿ ಕೆಳಕಂಡ ನಿಗಮಗಳಿಂದ ಕೊರೆದ ಕೊಳವೆ ಬಾವಿಗಳ ವಿವರ.

1. ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ –26
2. ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ನಿಮಗ –103

ಆ) ಬಂದಿದೆ.

ಇ) ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ 9 ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮದಲ್ಲಿ 23 ಕೊಳವೆ ಬಾವಿಗಳು ಬಾಕಿ ಇರುತ್ತವೆ.

ಈ) ವಿದ್ಯುತ್ ಸಂಪರ್ಕ ಕಲ್ಪಿಸದೆ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ.

5155 (5303) ಶೀ ವಿಶ್ವನಾಥ್ ಹೆಚ್.ಎಂ. (ಸಕಲೇಶಪುರ): ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಿಗೆ 2004–05 ಮತ್ತು 2005–06 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡಿರುವ ಕೊಳವೆ ಬಾವಿಗಳೆಷ್ಟು;

ಆ) ಕೊಳವೆ ಬಾವಿ ಕೊರೆಯಲು ಯಾವ ಕಂಪನಿಗೆ ವಹಿಸಲಾಗಿದೆ:

ಇ) ಈ ಸಾಲುಗಳಲ್ಲಿ ಕೊರೆಯಿಸಿರುವ ಬಾವಿಗಳೆಷ್ಟು:

ಈ) ಕೊರೆಯದೆ ಇರುವ ಕೊಳವೆ ಬಾವಿಗಳೆಷ್ಟು:

ಉ) ಕೊರೆಯದೆ ಇರಲು ಕಾರಣವೇನು?

ಊ) ಕೊಳವೆ ಬಾವಿ ಕೊರೆಯಲು ಸಮಸ್ಯೆ ಇದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಸಕಲೇಶಪುರ ಮತ್ತು ಆಲೂರು ಎರಡು ತಾಲ್ಲೂಕುಗಳು ಸಕಲೇಶಪುರ ಮತಕ್ಷೇತ್ರಕ್ಕೆ ಒಳಪಟ್ಟಿದ್ದು, 2004–05 ಮತ್ತು 2005–06ನೇ ಸಾಲಿಗೆ ಸದರಿ ಮತಕ್ಷೇತ್ರಕ್ಕೆ ಈ ಕೆಳಕಂಡಂತೆ ಗುರಿ ನಿಗದಿಪಡಿಸಲಾಗಿದೆ.

ವರ್ಷ	ನಿಗದಿಪಡಿಸಿದ ಗುರಿ		
	ಪ.ಜಾತಿ	ಪ.ವರ್ಗ	ಒಟ್ಟು
2004–05	16	02	18
2005–06	48	35	83

ಆ) 2004–05ನೇ ಸಾಲಿನಲ್ಲಿ ಈ ಕೆಳಕಂಡ ಕಂಪನಿಗಳಿಗೆ ಕೆಲಸ ವಹಿಸಲಾಗಿದೆ.

1. ಮೆ: ಬಾಲಾಜಿ ಡ್ರಿಲ್ಲರ್ಸ್, ಬಿಜಾಪುರ
2. ಮೆ: ರವಿ ಬೋರ್‌ವೆಲ್ಸ್, ಕಡೂರು
3. ಮೆ: ಜೇನುಕಲ್ ಬೋರ್‌ವೆಲ್ಸ್, ಅರಸೀಕೆರೆ.

ಇ) ಸದರಿ ಮತಕ್ಷೇತ್ರದಲ್ಲಿ 2004–05 ನೇ ಸಾಲಿನಲ್ಲಿ 10 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. (ಈ 10 ಕೊಳವೆ ಬಾವಿಗಳು 2003–04 ನೇ ಸಾಲಿನಲ್ಲಿ ಬಾಕಿ ಇದ್ದ ಗುರಿಯಲ್ಲಿ ಕೊರೆದ ಕೊಳವೆ ಬಾವಿಗಳಾಗಿರುತ್ತವೆ.)

2005–06ನೇ ಸಾಲಿನಲ್ಲಿ ನಿಗದಿಪಡಿಸಿದ ಗುರಿಯಂತೆ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಮುಗಿದ ನಂತರ ಕೊಳವೆ ಬಾವಿಗಳನ್ನು ಕೊರೆಯಲಾಗುವುದು.

ಈ) ಸಕಲೇಶಪುರ ಮತಕ್ಷೇತ್ರದಲ್ಲಿ 2004–05 ಮತ್ತು 2005–06ನೇ ಸಾಲಿಗೆ ನಿಗದಿಪಡಿಸಿದ ಗುರಿಯಂತೆ 101 ಕೊಳವೆ ಬಾವಿಗಳು ಕೊರೆಯಲು ಬಾಕಿ ಇವೆ.

ಉ) 2003–04ನೇ ಸಾಲಿನಲ್ಲಿ ಕೊಳವೆ ಬಾವಿಗಳನ್ನು ಕೊರೆಯಲು ಟೆಂಡರ್ ಕರೆಯಲಾಗಿದ್ದು, ಮೆ:ರಾಜ ರಾಜೇಶ್ವರಿ ಬೋರ್‌ವೆಲ್ಸ್ ಕಂಪನಿ ಇವರು ಟೆಂಡರ್‌ನಲ್ಲಿ ಪ್ರತಿ ಮೀಟರ್‌ಗೆ ರೂ.228 ದರವನ್ನು ನಮೂದಿಸಿದ್ದು, ಟೆಂಡರ್‌ನಲ್ಲಿ ಈ ಜಿಲ್ಲೆಗೆ ಸಂಬಂಧಿಸಿದಂತೆ ಅತಿ ಕಡಿಮೆ ದರ ನಮೂದಿಸಿದ